ಆಮೇಲೆ ಮಲ್ಲಿಕಾ, ರಮೇಶ್ ಇಬ್ಬರೂ ಲೆಹರ್ ಚಾನಲ್ ಸೇರಿದ ಮೇಲೆ ಅವಳ ಕೆಲಸದಲ್ಲಿ ಅವಳೂ, ಅವನ ಕೆಲಸದಲ್ಲಿ ಅವನೂ ತೊಡಗಿ, ಪುರಸತ್ತಿಲ್ಲದೆ ಕೆಲಸ ಮಾಡತೊಡಗಿದಾಗ ಈ ಥರದ ಪ್ರಸಂಗಗಳು ಕಡಿಮೆಯಾಗಿದ್ದವು. ಆದರೂ ಒಮ್ಮೊಮ್ಮೆ ಅವಳ ಊಹಾಪೋಹದ ಕತೆಗಳು ಮರುಕಳಿಸಿದಾಗ, ರಮೇಶ್, 'ಹಿಂದೊಮ್ಮೆ ಖ್ಯಾತ ಸ್ಕ್ರಿಪ್ಟ್ ರೈಟರ್ ಮಲ್ಲಿಕಾ ಮೇಡಂ ಹೆಣೆಯುತ್ತಿದ್ದ ಅದ್ಭುತರಮ್ಯ ಕತೆಗಳ ಕಾಲ ಮತ್ತೆ ಬಂದಂತಿದೆ!' ಎಂದು ಅವಳನ್ನು ತಿವಿಯುತ್ತಿದ್ದ; ಮಲ್ಲಿಕಾ ನಾಚಿ ತುಟಿ ಕಚ್ಚಿ ಮೋಹಕವಾಗಿ ನಗುತ್ತಿದ್ದಳು.

ಆದರೆ, ಈಚಿನ ಎರಡು ವರ್ಷಗಳಲ್ಲಿ ವೃತ್ತಿಯ ಏರುಪೇರುಗಳು ಹೆಚ್ಚತೊಡಗಿದಂತೆಲ್ಲ ಮಲ್ಲಿಕಾ ಕಾಯಿಲೆ ಮರುಕಳಿಸಿದಂತಿತ್ತು. ಅವಳ ಊಹಾಲೋಕ ಸೈತಾನನ ಕಾರ್ಖಾನೆಯಂತೆ ಕೆಲಸ ಮಾಡತೊಡಗುತ್ತಿತ್ತು. 'ಈ ಥರದ ಅಸಹ್ಯಕರ ಊಹೆಗಳನ್ನು ಮಾಡುವಷ್ಟು ನನ್ನ ಮನಸ್ಸು ಯಾಕೆ ಕೆಡುತ್ತೆ ಎಂಬುದು ನನಗೇ ಗೊತ್ತಿಲ್ಲ' ಎಂದು ಮಲ್ಲಿಕಾ ಒಮ್ಮೊಮ್ಮೆ ದಿಗಿಲುಗೊಳ್ಳುತ್ತಿದ್ದಳು; ಆ ದಿಗಿಲನ್ನು ರಮೇಶನ ಜೊತೆಯೂ ತೋಡಿಕೊಳ್ಳುತ್ತಿದ್ದಳು. ಎಷ್ಟೋ ಸಲ ರಂಜಿತಾಳ ಅನುಭವಗಳನ್ನು ಕೇಳಿಸಿಕೊಂಡು ಬಂದ ಮಲ್ಲಿಕಾ ಅವನ್ನೆಲ್ಲ ತನಗೂ ಆರೋಪಿಸಿಕೊಂಡು ಹೇಳುತ್ತಿರಬಹುದು ಎಂದು ರಮೇಶನಿಗೆ ಅನ್ನಿಸುತ್ತಿತ್ತು! ಯಾಕೆಂದರೆ, ತನ್ನ ಬದುಕಿನ ಕತೆಯನ್ನು ನಿರ್ದೇಶಕನೊಬ್ಬ ವಿಕೃತಗೊಳಿಸಿ ಸಿನಿಮಾ ಮಾಡಿದ್ದನ್ನು ರಂಜಿತಾ ಹೇಳಿದ ದಿನ, ಮಲ್ಲಿಕಾ ತನಗೂ ಹಾಗಾಗಿದೆಯೆಂದು ರಮೇಶನ ಎದುರು ಅತ್ತಿದ್ದಳು. ಆಗ ಬರುತ್ತಿದ್ದ ಸೀರಿಯಲ್ಲೊಂದರ ಪಾತ್ರಗಳನ್ನು ರಮೇಶನ ಸಲಹೆಯಂತೆ ರೂಪಿಸಲಾಗಿದೆಯೆಂದೂ, ಅದರಲ್ಲಿ ಮಲ್ಲಿಕಾ ಥರ ಇರುವ ಕೇರ್ ಫ್ರೀ ಹುಡುಗಿಯೊಬ್ಬಳನ್ನು ಕಟುವಾಗಿ ಟೀಕಿಸಿ, ಹಳೆಯ ಕಾಲದ ಗೌರಮ್ಮನಂಥವಳ ಪಾತ್ರವನ್ನು ವೈಭವೀಕರಿಸಲಾಗಿದೆಯೆಂದೂ ಯಾರೋ ಮಲ್ಲಿಕಾ ಕಿವಿ ಕಚ್ಚಿದ್ದರು; ಅದನ್ನು ನಂಬಿದ ಮಲ್ಲಿಕಾ ಇದ್ದಕ್ಕಿದ್ದಂತೆ ರಮೇಶ್ ಬಗ್ಗೆ ಕಹಿಯಾಗಿದ್ದಳು. ಮುಂದಿನ ಎರಡೇ ದಿನಕ್ಕೆ ಆ ಸುದ್ದಿಯಲ್ಲಿ ಯಾವುದೇ ಹುರುಳಿಲ್ಲವೆಂದು ಅವಳೇ ಹೇಳುತ್ತಾ ಪೆಚ್ಚಾಗಿ ನಕ್ಕಿದ್ದಳು.

> **ಆತ್ಮಹತ್ಯೆಯ ಕುತ್ತಿನಿಂದ ಪಾರಾಗಿ ಚೇತರಿಸಿಕೊಂಡ ನಟಿ ರಂಜಿತಾಳಿಗೆ ಚಿಕಿತ್ಸೆ ಕೊಡುತ್ತ, ತನ್ನ ಹಿಂದಿನ ಪೇಶೆಂಟ್ ಆಗಿದ್ದ ಮಲ್ಲಿಕಾಳ ಮನಸ್ಸಿನ ಬಗ್ಗೆ ಹೆಚ್ಚು ತಿಳಿದುಕೊಂಡರೇ ಡಾ. ರಾಮಾನಾಯಕ್?**

ಇಂಥ ಪ್ರಸಂಗಗಳ ಜೊತೆಗೇ, ಎಷ್ಟೋ ಸಲ ತನ್ನ ವರದಿಗಳಲ್ಲಿ ಮಲ್ಲಿಕಾ ಸಾಧಾರಣ ಘಟನೆಗಳನ್ನೂ, ವಿವರಗಳನ್ನೂ ಹೇಗೆಂದರೆ ಹಾಗೆ ಜೋಡಿಸಿ ಸತ್ಯದ ಸುಳಿವೇ ಇಲ್ಲದಂಥ ಕೊಂಡಿಗಳನ್ನು ಸೃಷ್ಟಿಸುತ್ತಿದ್ದ ರೀತಿಗೆ ರಮೇಶ್ ಬೆಚ್ಚುತ್ತಿದ್ದ! ಇದೆಲ್ಲ ಮಲ್ಲಿಕಾ ಸೀರಿಯಲ್ಲುಗಳಿಗೆ ಕತೆ ಬರೆಯುತ್ತಿದ್ದ ಕಾಲದ ಅಭ್ಯಾಸವಿರಬಹುದು ಅಂದುಕೊಳ್ಳುತ್ತಿದ್ದ ರಮೇಶನಿಗೆ, ಈ ಅಭ್ಯಾಸ ಅವಳು ರಿಪೋರ್ಟಿಂಗಿಗೆ ಇಳಿದ ಮೇಲೆ ಹೆಚ್ಚಾದಂತೆ ಕಾಣುತ್ತಿತ್ತು. ಮಲ್ಲಿಕಾ ಮಗುವಿನ ಹಾಗೆ, ತನಗರಿವಿಲ್ಲದೆಯೇ ಸುಳ್ಳು ಹೇಳುತ್ತಿದ್ದಾಳೆ ಎಂದು ಕೂಡ ಅವನಿಗೆ ಅನ್ನಿಸುತ್ತಿತ್ತು. ಈಚೀಚೆಗಂತೂ ಸೆಲೆಬ್ರಿಟಿಗಳು ಸ್ಟುಡಿಯೊಗೆ ಬಂದು ತಮ್ಮ ಮನಸ್ಸಿನಲ್ಲಿರುವುದಕ್ಕೆ ಸಂಪೂರ್ಣವಾಗಿ ವಿರುದ್ಧವಾದದ್ದನ್ನೇ ಮಾತಾಡುವುದನ್ನು ಕೇಳಿ ಕೇಳಿ ಮಲ್ಲಿಕಾಳ ಮನಸ್ಸಿನಲ್ಲಿ ಸತ್ಯ, ಸುಳ್ಳುಗಳ ನಡುವಣ ವ್ಯತ್ಯಾಸವೇ ಚಿಂದಿಯಾಗಿ ಹೋದಂತೆ ಕಾಣುತ್ತಿತ್ತು. ಇತ್ತಿತ್ತಲಾಗಿ ತಾನು ಬಲ್ಲ ಅನೇಕರಿಗೆ ಹೀಗೇ ಆಗುತ್ತಿರುವುದನ್ನು ರಮೇಶ್